# ನೋಡೆ ಗೋಪೀ ಗೋಕುಲದೊಳು ಹರಿ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 24.
2. **Note:** This kruti is not available in other standard books that I referred.

ರಾಗ: ಶಂಕರಾಭರಣ ತಾಳ: ಏಕ

ನೋಡೆ ಗೋಪೀ ಗೋಕುಲದೊಳು ಹರಿ
ಮಾಡುವ ಲೀಲೆಗಳಪ್ರತಿಯಮ್ಮ || ಪ ||

ರಂಗನನೆತ್ತಿ ಸಂಭ್ರಮದಿಂದಲಿ
ಅಂಗಣದೊಳಗೆ ನಿಂದಾಡಿಸಲು
ತಿಂಗಳ ಬಿಂಬವ ಕಂಡಾಕ್ಷಣ ತ-
ನ್ನಂಗೈಯೊಳಗೇ ನಿಲಿಸಿಕೊಡೆಂಬ || 1 ||

ಚಿನ್ನನು ನೋಡಲಿ ಎಂದಕ್ಕರದಲಿ
ಕನ್ನಡಿಯನು ತಂದು ಕೈಯಲಿ ಕೊಡಲು
ತನ್ನ ಮುಖದ ಪ್ರತಿಬಿಂಬವ ಕಂಡು ಅ-
ದನ್ನು ಕರೆದು ಬಳಿಯಿರಿಸಿರಿಯೆಂಬ || 2 ||

ಅರಿಯದೆ ದೀಪವ ಕೆಂಪಗೆ ಕಂಡು
ಸೆರಗಿನಲ್ಲಿ ಕೊಡು ಆಡುವೆನೆಂಬ
ಕರುವಿನಂತೆ ತನ್ನನು ಕೊಂಡೊಯ್ದು
ತುರುಗಳ ಮೊಲೆಯನು ಉಣಿಸಿರಿಯೆಂಬ || 3 ||

ಪರಿಪರಿಯಿಂದಲಿ ಗೋಡೆಯ ಮೇಲೆ
ಬರೆದಿಹ ಚಿತ್ರದ ಗೊಂಬೆಯ ನೋಡಿ
ಕರವ ಪಿಡಿದು ಎಳೆತಂದು ತನ್ನಯ

ನೆರೆಯಲ್ಲಿಯೆ ನೀವಿರಿಸಿರಿಯೆಂಬ ॥ 4 ॥

ತರುಣಿ ನಿನ್ನಯ ಸುಕೃತದ ಫಲವು
ಹರುಷವೆಮಗೆ ಅಭಿವೃದ್ಧಿಯಾಗಿಹುದು
ಪುರಂದರ ವಿಠಲನ ಚರಿಯವ ನೋಡಲು
ಧರೆಯೊಳಗಿನ ಬಾಲಕರಂತಲ್ಲವೆ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಶ್ರೀ ಕೃಷ್ಣನ ಬಾಲ ಲೀಲೆಯ ಕಥೆಗಳನ್ನು ಕೌತುಕ ಮಾಡಿ ಒಬ್ಬ ಗೋಪಿ ಇನ್ನೊಬ್ಬಳಿಗೆ ಹೇಳುತ್ತಾಳೆ. ಇದರಲ್ಲಿಯ ಶ್ರೀ ಕೃಷ್ಣನ ಬೇರೆ ಬೇರೆ ಬಾಲಚೇಷ್ಟೆಗಳ ವಿಷಯ ಭಾಗವತ, ಹರಿವಂಶಗಳಲ್ಲಿ ಕಂಡುಬರುವುದಿಲ್ಲ. ಬೇರೆ ಪುರಾಣಗಳಲ್ಲಿ ಇರಬಹುದು.

**ಆಪ್ರುತಿ** = ಸರಿಗಟ್ಟದ

**ತಿಂಗಳ** = ಚಂದ್ರ

**ಚರಿಯ** = ಇರುವಿಕೆ, ಸ್ಥಿತಿ

**Classification:** Keerthane
**Ankita:** purandara vittala
**Location:** NA
**Category:** Krishna Leele
**Sub-Category:** gopi, Krishna, gokula, ranga, Chandra, kai, kannadi, govu, santosha, bhumi, ADu, ATa
**Pravachana:** NA
**Explanation:** NA